# ‘ಕಿಟ್ ಲೆನ್ಸ್’ ಕಡೆಗಣಿಸಬೇಡಿ!

‘ಪುಕ್ಕಟೆ ಸಿಕ್ಕಿದ್ದಕ್ಕೆ ಕಿಮ್ಮತ್ತಿಲ್ಲ’ ಎನ್ನುವಂತೆ ಗ್ರಾಹಕರಿಗೆ ಕಿಟ್ ಲೆನ್ಸ್ ಮೇಲೆ ಅದೇನೋ ಒಂದು ಥರದ ಅಸಡ್ಡೆ. ‘ಅದರಲ್ಲೇನು ಫೊಟೋ ಹೊಡೀತೀಯ ಮಾರಾಯ..’ ಎನ್ನುವಂತೆ ನೋಡುತ್ತಾರೆ.

■ ಚಿತ್ರ– ಲೇಖನ: **ಹರೀಶ್ ಹಳೆಮನೆ**





ಹವ್ಯಾಸಕ್ಕಾಗಿ ಹೊಸ ಡಿಎಸ್‌ಎಲ್‌ಆರ್ ಕ್ಯಾಮೆರಾ ಕೊಂಡುಕೊಳ್ಳುವವರಲ್ಲಿ ಜೊತೆಯಲ್ಲಿ ಸಿಗುವ ‘ಕಿಟ್ ಲೆನ್ಸ್’ ಬಗ್ಗೆ ಒಂದು ಬಗೆಯ ಅಸಡ್ಡೆ ಮನೆಮಾಡಿರುತ್ತದೆ. ‘ಪುಟ್ಟದಾಗಿರುವ ಲೆನ್ಸ್ ಅದು, ಅದರಲ್ಲೇನು ಫೊಟೋ ತೆಗೆಯುವುದು..’ ಎಂದು ಮೂಗು ಮುರಿಯುವವರೇ ಹೆಚ್ಚು. ಕ್ಯಾಮೆರಾ ಕೊಳ್ಳುವಾಗಲೂ ಅಷ್ಟೇ, ಕಿಟ್ ಲೆನ್ಸ್ ಅಲ್ಲದೆ ಟೆಲಿ–ಝೂಮ್ ‘ಆಫರ್’ನಲ್ಲಿ ನೀಡುತ್ತಿದ್ದಾರೆಂದರೆ ಬೇಡದೇ ಇದ್ದರೂ ಅದನ್ನು ಮುಗಿಬಿದ್ದು ಕೊಳ್ಳುತ್ತಾರೆ. ಕ್ಯಾಮೆರಾ ಕೊಳ್ಳಲು ಸಲಹೆ ನೀಡಿ ಎಂದು ಸಲಹೆ ಕೇಳಿಕೊಂಡು ಬರುವವರಿಗೂ, ‘ಕಿಟ್ ಲೆನ್ಸ್ ಮಾತ್ರ ಕೊಂಡುಕೊಳ್ಳಿ, ಮತ್ತೆ ನಿಧಾನವಾಗಿ ಮುಂದಿನ ಲೆನ್ಸ್ ಕೊಂಡುಕೊಳ್ಳಬಹುದು’ ಎಂಬ ಸಲಹೆ ನೀಡಿದರೆ ಮುಖ ಸೊಟ್ಟಗೆ ಮಾಡಿಕೊಳ್ಳುತ್ತಾರೆ.

ಹಾಗಿದ್ದರೆ ಕ್ಯಾಮೆರಾ ಜೊತೆಯಲ್ಲಿಯೇ ನೀಡುವ ಈ ಕಿಟ್ ಲೆನ್ಸ್ ಅಷ್ಟೊಂದು ಅನುಪಯುಕ್ತವೇ? ಖಂಡಿತ ಅಲ್ಲ. ಕಿಟ್ ಲೆನ್ಸ್‌ಗಳು ಹಲವಾರು ಸಂದರ್ಭಗಳಲ್ಲಿ ಉಪಯುಕ್ತವಾಗಿ ಕಾಣಿಸಿಕೊಳ್ಳುತ್ತದೆ. ಪ್ರವಾಸ ಹೋಗುವಾಗ ಹೆಚ್ಚಿನ ಲಗೇಜ್ ಒಯ್ಯಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಕಿಟ್ ಲೆನ್ಸ್ ನಿಮಗೆ ಅನುಕೂಲವಾಗಬಲ್ಲದು. ಪ್ರವಾಸ ಹೋದ ಕಡೆ ಅಲ್ಲಿನ ಭೂದೃಶ್ಯಗಳನ್ನು ಸೆರೆಹಿಡಿಯಲು ಈ ಲೆನ್ಸ್ ಧಾರಾಳ ಸಾಕು.

ಪ್ರವೇಶಮಟ್ಟದ ಡಿಎಸ್‌ಎಲ್‌ಆರ್ ಕ್ಯಾಮೆರಾಗಳಲ್ಲಿ ಹೆಚ್ಚಾಗಿ 18–55 ಮಿ.ಮೀ ಲೆನ್ಸ್‌ಅನ್ನು ಜೊತೆಯಲ್ಲೇ ನೀಡಿರುತ್ತಾರೆ. ಇದನ್ನೇ ನಾವು ಸಾಮಾನ್ಯವಾಗಿ ‘ಕಿಟ್ ಲೆನ್ಸ್’ ಎನ್ನುವುದು. ಛಾಯಾಗ್ರಹಣದ ಭಾಷೆಯಲ್ಲಿ ಹೇಳುವುದಾದರೆ ಈ ಲೆನ್ಸ್ ಹಲವಾರು ಉಪಯೋಗಗಳಿಗೆ ಸಾಕಾಗುತ್ತದೆ. ಒಲಿಂಪಸ್, ಪ್ಯಾನಾಸಾನಿಕ್ ಕಂಪೆನಿಗಳು ತಯಾರಿಸುವ ‘ಮೈಕ್ರೋ ಫೋರ್–ಥರ್ಡ್ಸ್’ ಎನ್ನುವ ಕ್ಯಾಮೆರಾಗಳ ಜೊತೆಯಲ್ಲಿ 14–42 ಮಿ.ಮೀ ಲೆನ್ಸ್‌ಅನ್ನು ನೀಡುತ್ತಾರೆ. ಇದು ಕೂಡ ಹೆಚ್ಚು ಕಡಿಮೆ ಅದೇ ರೀತಿಯ ಫಲಿತಾಂಶವನ್ನು ನೀಡುತ್ತದೆ. ಗ್ರಾಹಕರಿಗೆ ಹೆಚ್ಚು ಹೊರೆಯಾಗದಿರಲೆಂದೇ ಕ್ಯಾಮೆರಾ ಜೊತೆಯಲ್ಲಿ